100

ಭಕ್ತ ಕುಚೇಲ

(ಏಕಾಂಕ ಸಂಗೀತ ನಾಟಕ)

★

ರಚಯಿತರು:

ಶ್ರೀ| ಅಂಬಾತನಯ, ಮುದ್ರಾಡಿ.

1956.

ಒಂದಾಣೆ ಮಾಲೆ

'ಒಂದಾಣೆ ಮಾಲೆ'ಯ ಪ್ರಕಟಣೆಗಳು:

೧*ಕೆಪ್ಪಟಿರಾಯ; ೨ ನಾರೀಶ್ವರರು(ದ್ವಿ.ಮುದ್ರಣ); ೩ ಕಳ್ಳನಿಗೆ ಸಂಭಾವನೆ(ದ್ವಿ.ಮುದ್ರಣ) ೪ *ಸದ್ರಿಸುಬ್ಬ; ೫ ಅದ್ಭುತ ತ್ಯಾಗ (ದ್ವಿ.ಮುದ್ರಣ); ೬ *ಚುನಾವಣೆ ಅರ್ಥಾತ್ ಬನಾವಣೆ; ೭*ಬೀಡಿ ಸೇದಬೇಡಿ ಮತ್ತು ಆ ಮಗು; ೮*ಇಂಗ್ಲಿಷ್–ಕನ್ನಡ ಅರ್ಥಕೋಶ; ೯ ಲಂಚಕ್ಕೆ ಸಂಚಕಾರ (ದ್ವಿ.ಮುದ್ರಣ); ೧೦ *ಟಿಶ್ಯೂ ಔಷಧಿಗಳ ಕೈಪಿಡಿ; ೧೧ *ಶ್ರೀ ಕ್ಷೇತ್ರ ಧರ್ಮಸ್ಥಳ (ತೃ. ಮುದ್ರಣ); ೧೨ ಜೀವದ ಮೌಲ್ಯ ಮತ್ತು ಇತರ ಕಥೆಗಳು; ೧೩ ಸತ್ತವನ ಸೇಡು ಮತ್ತು ಇತರ ಕಥೆಗಳು; ೧೪ *ವೆಂಕಟನ ಸಂಕಟ; ೧೫ ಬಾಬಿಗೆ ಬಾಸಿಂಗ (ದ್ವಿ.ಮುದ್ರಣ); ೧೬ ವೇಣೂರಿನ ಗತವೈಭವ(ದ್ವಿ.ಮುದ್ರಣ); ೧೭ ಒಗಟುಗಳು (ದ್ವಿ. ಮುದ್ರಣ); ೧೮ ಜಗಳಗಂಟಿ ಮತ್ತು ಇತರ ಕಥೆಗಳು; ೧೯ ರಥೋತ್ಸವ; ೨೦ ಕರಿನಾಯಿ ಮತ್ತು ಮುಪ್ಪು; ೨೧ ಭಾರತದ ಮಹಾನಗರ–I(ದ್ವಿ.ಮುದ್ರಣ); ೨೨ ತಿರುಕ್ಕುರಲ್ (ದ್ವಿ.ಮುದ್ರಣ); ೨೩ ಸೂರ್ಯನ ಸಂಸಾರ; ೨೪ ಭಾರತದ ಮಹಾನಗರ–II (ದ್ವಿ.ಮುದ್ರಣ); ೨೫ ಧೈರ್ಯ ಮತ್ತು ಇತರ ಸತ್ಯ ಕಥೆಗಳು; ೨೬ ಮಾರಾವತಾರ(ದ್ವಿ. ಮುದ್ರಣ); ೨೭ ಹಾಸವಿಲಾಸ; ೨೮ ಸತ್ಯವಂತ ಬಾಬಿ [ದ್ವಿ.ಮುದ್ರಣ]; ೨೯ ಜಾಣ್ಮೆಯ ಒಗಟುಗಳು ೩೦ ಜಾತಕ ಕಥೆಗಳು; ೩೧ ಕಾರ್ಕಳದ ಚರಿತ್ರೆ; ೩೨ ಮರ್ಜಿ; ೩೩ ದರ್ಶನದ ಕಥೆಗಳು; ೩೪ ಅಳುವಿನ ಹೊಳೆ ಮತ್ತು ಕೇಶವಭೂಪ; ೩೫ ಶರಾಬಿನ ಪೀಪಾಯಿಗಳು; ೩೬ ಉಪದೇಶ ಶತಕ; ೩೭ ನಿಮಗೆ ಗೊತ್ತಿದೆಯೇ?; ೩೮ ಚತುರ ಚಮತ್ಕಾರ; ೩೯ ಸತೀ ಸಾವಿತ್ರಿ (ದ್ವಿ.ಮುದ್ರಣ); ೪೦ ಆಭರಣಗಳ ಪೆಟ್ಟಿಗೆ ಮತ್ತು ಇತರ ಕಥೆಗಳು; ೪೧ ಭಾರತದ ಮಂತ್ರಿಮಂಡಲಗಳು(ದ್ವಿ.ಮುದ್ರಣ); ೪೨ ಕಾಲುಬಳೆಯ ಕಥೆ; ೪೩ ಭಾರತದ ನಾಲ್ಕು ಕಲಶಗಳು; ೪೪ ವ್ಯಸನದಿಂದ ಲಾಭ ಮತ್ತು ಇತರ ಕಥೆಗಳು; ೪೫ ಸುಭಾಷಿತ; ೪೬ ೧೮೫೭ರ ಸಿಪಾಯಿದಂಗೆ; ೪೭ ಅಕಾಂಡ ತಾಂಡವ; ೪೮ ಸಾಹಸದ ಕಥೆಗಳು; ೪೯ ಸಂಜ್ಞಾಜ್ಞಾನಕೋಶ; ೫೦ ಪಂಡಿತನ ಪಿಟೀಲು; ೫೧ ಭೋಗಯಾತ್ರೆ; ೫೨ ಸಂಗ್ರಾಮಸಿಂಹ; ೫೩ ಧರ್ಮಶಿಕ್ಷಾ; ೫೪ ಮಹಾತ್ಮ; ೫೫ ಮೀರಾಬಾಯಿ; ೫೬ ವೀರರಮಣಿ ಕರ್ಮದೇವಿ: ೫೭ ಅರಳಿದ ನಗು; ೫೮ ಸಚಿತ್ರ ಜಪಾನ್; ೫೯ ಚುಟ್ಟೆಬಿಟ್ಟೆಥಿಟ್ಟೆ; ೬೦ ನಿರಪರಾಧಿ; ೬೧ ಭಕ್ತವಾಣಿ; ೬೨ ಜಾನಪದ ಸಾಹಿತ್ಯ; ೬೩ ಡಾಕ್ಟರ್ ಆರೋಗ್ಯಪರ್; ೬೪ ಲೌಕಿಕ ನ್ಯಾಯಗಳು; ೬೫ ಶಿಶುಪಾಲ ಮಾನಭಂಗ; ೬೬ ಜರಾಸಂಧ ವಧೆ; ೬೭ ಜವಾಹರಲಾಲ (ದ್ವಿ.ಮುದ್ರಣ); ೬೮ ಕರುಣೆ ಮತ್ತು ಇತರ ಕಥೆಗಳು; ೬೯ ಶ್ರೀಕ್ಷೇತ್ರ ಉಡುಪಿ; ೭೦ ವಿನೋದ ವಿಹಾರ; ೭೧ ಭಾರತದ ಗತವೈಭವ; ೭೨ ಸತ್ಯ ಹರಿಶ್ಚಂದ್ರ; ೭೩ ಸೂಕ್ತಿಗಳು; ೭೪ ಉ.ಕ.ದ ಯಕ್ಷಗಾನ ಕಲಾವಿದರು; ೭೫ ದೇವರ ಸಾಮ್ರಾಜ್ಯದಲ್ಲಿ...; ೭೬ ಕ್ರಾಂತಿಕಂಠೀರವ ಭಗತ್‌ಸಿಂಘ್; ೭೭ ಜಾತಕಪಠನ ಮತ್ತು ಇತರ ಕಥೆಗಳು; ೭೮ ಅಮೃತವಾಣಿ; ೭೯ ಮಾಯಾಮೃಗ; ೮೦ ಡಾಕ್ಟರ್ ಗಾಂಧೀಜಿ; ೮೧ ಆದಿಶ್ರೀ ಶಂಕರಾಚಾರ್ಯರ ಜೀವನ ಚರಿತ್ರೆ; ೮೨ ಆದಿಶ್ರೀ ಶಂಕರಾಚಾರ್ಯ ವಿರಚಿತ ಸ್ತೋತ್ರಗಳು (ಅರ್ಥ ಸಹಿತ); ೮೩ ಬೆಡಗಿನ ನಾಡು ಕೊಡಗು; ೮೪ ಅಮೆಯ ಚಿಪ್ಪು ಮತ್ತು ಇತರ ಸತ್ಯಕಥೆಗಳು; ೮೫ ಮಂಗಳೂರಿಂದ ಮಧುರೆಗೆ; ೮೬ ಸತೀ ವೃಂದಾ; ೮೭ ಗೌತಮನ ಗೃಹತ್ಯಾಗ; ೮೮ ಗೃಹವೈದ್ಯ; ೮೯ ನಮ್ಮ ನಾಟಕಗಳು; ೯೦ ಜಾನಪದ ಕಥೆಗಳು; ೯೧ ಕೆಲವು ಉಪಯುಕ್ತ ಸಲಹೆಗಳು. ೯೨ ಅಭಿಜ್ಞಾನ ಶಾಕುಂತಲದಲ್ಲಿ ಲೋಕನೀತಿ. ೯೩ ಹೋಮಿಯೋಪಥಿ-ಚಿಕಿತ್ಸಾಸಾರ. ೯೪ ಯಕ್ಷಗಾನ ನಾಟಕದ ಪರಂಪರೆ; ೯೫ ಪುನರುಜ್ಜೀವನ (ಏಕಾಂಕ ನಾಟಕ); ೯೬ ಪ್ರಥಮ ಚಿಕಿತ್ಸೆಯ ಕೈಪಿಡಿ; ೯೭ ಹಸ್ತರೇಖಾ ವಿಜ್ಞಾನ; ೯೮ ಸ್ವಾತಂತ್ರ್ಯ; ೯೯ ಭಾರತೀಯ ಸ್ವಾತಂತ್ರ್ಯ ಸಂಗ್ರಾಮ; ೧೦೦ ಭಕ್ತ ಕುಚೇಲ.

*ಈ ಗುರುತು ಹಾಕಿದ ಪುಸ್ತಕಗಳ ಪ್ರತಿಗಳು ಮುಗಿದಿವೆ.

ಒಂದಾಣೆ ಮಾಲೆ, ಪ್ರಭಾತ ಆಫೀಸು, ರಥಬೀದಿ, ಮಂಗಳೂರು-೧.

ಮುನ್ನುಡಿ

ಅಮರಕಾವ್ಯವಾದ 'ಮಹಾಭಾರತ'ವು, ಮಾನವನ ನಿನ್ನೆಯ–ಇಂದಿನ–ನಾಳೆಯ ಇತಿಹಾಸವನ್ನು ಹೇಳುತ್ತಿದೆ. ಜೀವನದಲ್ಲಿನ ಪ್ರತಿಯೊಂದು ಸಮಸ್ಯೆಯನ್ನೂ ಅದು ಚರ್ಚಿಸಿ, ಉತ್ತರವಿತ್ತಿದೆ. ಮಾನವರಲ್ಲಿರುವ ಸ್ಥೂಲಭೇದಗಳನ್ನೂ ತಿಳಿಸಿದೆ, ಚಿತ್ರಿಸಿದೆ. ಅದು, ಮಾನವನಲ್ಲಿನ ಆಂತರಿಕ ಕಲಹಗಳನ್ನು ವಿವರಿಸುವಾಗ, ಶೌರ್ಯ–ಧೈರ್ಯ–ಸಾಹಸಗಳನ್ನು ವರ್ಣಿಸುವಾಗ, ಸುಂದರತಮ ಕರುಣೆಯ ಕಥೆಗಳನ್ನೂ ಕೊಟ್ಟಿರುತ್ತದೆ.

ಕೃಷ್ಣ, ಭೀಷ್ಮ, ದ್ರೋಣ, ಧರ್ಮರಾಯ, ಭೀಮ, ಅರ್ಜುನ, ಸುಯೋಧನ, ಅಶ್ವತ್ಥಾಮ, ಅಭಿಮನ್ಯು, ಶಲ್ಯ, ಶಕುನಿ ಇವರನ್ನು ಒಂದೊಂದು ಬಗೆಯಾಗಿ ಚಿತ್ರಿಸುವಾಗ, ಕರ್ಣ–ಸುಧಾಮರಂಥವರ ಕರುಣೆಯ ಕಥೆಗಳನ್ನು ಬಹು ಮಾರ್ಮಿಕವಾಗಿ, ಬಹು ರಸವತ್ತಾಗಿ ಕೊಟ್ಟಿದೆ. ರಣರಂಗದಲ್ಲಿ ಧೀರನೂ, ಶೂರನೂ ಆಗಿದ್ದ ಕರ್ಣನ ಜೀವನದಲ್ಲಿ ಮರುಕವಡಗಿದುದನ್ನು ಕೊಡುವಾಗ, ಕಡುದಾರಿದ್ರ್ಯವನ್ನು ಅನುಭವಿಸುವಾಗಲೂ ಆತ್ಮಾಭಿಮಾನವನ್ನೂ ಧೀರತೆಯನ್ನೂ ಮರೆಯದೆ ಸಹಿಸಿದ ಸುಧಾಮನನ್ನೂ ಬಲು ಸುಂದರವಾಗಿ ಮಹಾಭಾರತವು ನಮ್ಮ ಮುಂದಿರಿಸಿದೆ.

ಸುಧಾಮನ (ಕುಚೇಲನ) ಚರಿತ್ರವು ಕೃಷ್ಣನ ಚರಿತ್ರವೂ ಆಗಿದೆ. ಅಪ್ರತಿಮ ಮೇಧಾವಿಯೂ, ಸರಿಸಾಟಿಯಿಲ್ಲದ ರಾಜಕಾರಣಿಯೂ ಆಗಿದ್ದ ಶ್ರೀಕೃಷ್ಣನು, ಅತುಲೈಶ್ವರ್ಯ—ಸುಖೋಪಭೋಗಗಳಲ್ಲಿದ್ದಾಗಲೂ ತನ್ನ ಬಾಲ್ಯದ ಬಡ ಗೆಳೆಯನನ್ನು ಮರೆಯಲಿಲ್ಲ. ಕಷ್ಟಕ್ಲೇಶಗಳಿಂದ ಕಂಗೆಟ್ಟು ಬಂದ ಆ ಕೃಶಶರೀರಿಯನ್ನು ಕೃಷ್ಣನು ಅತ್ಯಾದರದಿಂದ ತನ್ನ ಅರಮನೆಯೊಳಗೆ ಸ್ವಾಗತಿಸಿ, ಹರುಷದಿಂದ ಅವನನ್ನು ಉಪಚರಿಸಿದನು; ಸುಧಾಮನಲ್ಲಿ ಆನಂದವನ್ನು ತುಂಬಲು ಮಾಡಬೇಕಾದುದೆಲ್ಲವನ್ನೂ ಮಾಡಿದನು. ಷಡ್ರಸಾನ್ನವನ್ನುಣ್ಣುತಿದ್ದ ಪುಣ್ಯಪುರುಷ ಕೃಷ್ಣನು ಸುಧಾಮನ ಒಂದು ಹಿಡಿ ಅವಲಕ್ಕಿ ಕಾಳುಗಳನ್ನು, ಪ್ರೇಮ–ಉಲ್ಲಾಸಗಳು ಉಕ್ಕಿಬರುತ್ತಿರುವ ಹೃದ

ಯದಿಂದ, ನಲವಿಂದ, ಸೆಳೆದು ತಿಂದನು. ಈ ಚಿಕ್ಕ ಕೃತಿಯು, ಪ್ರೇಮಪ್ರದರ್ಶನ ಮಾಡುವುದೂ—ಕಡುದರಿದ್ರ ಬಾಲ್ಯಸ್ನೇಹಿತನನ್ನು ತನ್ನ ಐಶ್ವರ್ಯೋಪಭೋಗಗಳ ಕಾಲದಲ್ಲಿ ಸ್ವಾಗತಿಸಿ ಆಲಿಂಗಿಸುವುದೂ—ಮಾನವಕೋಟಿಯೆಲ್ಲವೂ ಒಂದು ಬಳಗ ಎಂಬ ಆ ಉನ್ನತೋನ್ನತ ಭಾವನೆಯುಳ್ಳವನಿಗೆ ಮಾತ್ರ ಸಾಧ್ಯವಿದೆ ಎಂಬುದನ್ನು ವಿಶದೀಕರಿಸುತ್ತದೆ. ಒಬ್ಬ ಕಡುವೈರಿಯನ್ನು ಕ್ಷಮಿಸುವುದು, ಒಬ್ಬ ಧನವಂತ ಶತ್ರುವನ್ನು ಕ್ಷಮಿಸುವುದು—ಅಥವಾ ತನ್ನನ್ನು ನೋಯಿಸಿದವನಿಗೆ ದಯಾಭಿಕ್ಷೆ ನೀಡುವುದು—ಇದೆಲ್ಲವೂ, ಬಡಮಿತ್ರನನ್ನು ತನ್ನ ಸುಖಸಂಪತ್ತುಗಳ ಕಾಲದಲ್ಲಿ ತೆರೆದ ಹೃದಯದಿಂದ ಆದರಿಸುವುದಕ್ಕಿಂತಲೂ ಸುಲಭವಿದೆ.

—ಅದೆಲ್ಲದಕ್ಕೂ ಮಿಗಿಲಾಗಿ, ತನ್ನ ಆ ಅಭಾಗಿ ಮಿತ್ರನ ಕಷ್ಟಗಳನ್ನು ಅವನನ್ನು ಪ್ರಶ್ನಿಸದೆನೇ ತಿಳಿದು ಚಿಕಿತ್ಸಿಸುವುದು ಆ ಮಾನವನ ಶ್ರೇಷ್ಠತೆಯನ್ನು ತಿಳಿಸುತ್ತದೆ.

ಸದಾ ರಾಜಕೀಯಾದಿ ವಿನೋದಗಳಲ್ಲಿ ತೊಡಗಿದ್ದ ಕೃಷ್ಣನ ಹೃದಯದ ಮೃದುತರ ಅಂಶವನ್ನು ಈ ಕುಚೇಲ ಚರಿತ್ರೆಯೇ ಚೆನ್ನಾಗಿ ತಿಳಿಸುವುದು. ಭಾರತವು ಆ ಮಹಾ ಮಹಿಮನ ಜನ್ಮದಿನವನ್ನು ಆಚರಿಸುತ್ತಿರುವ ಈ ತಿಂಗಳಲ್ಲಿ, ನಮ್ಮ ನೂರನೇ ಪುಸ್ತಕವಾಗಿ ಈ 'ಭಕ್ತ ಕುಚೇಲ' ವಿಶಾಂಕವನ್ನು ಸಂದರ್ಭೋಚಿತವೆಂದು ವಾಚಕರಿಗರ್ಪಿಸುತ್ತಿರುವೆವು.

ಕೇವಲ ನಾಲ್ಕೇ ಪಾತ್ರಗಳಿದ್ದು, ಈ ನಾಟಕವು ಶಾಲಾ ಬಾಲಕ--ಬಾಲಕಿಯರಿಗೆ ಆಡಲು ಸುಲಭವೂ ಇದೆ.

ಈ ಕೃತಿಯು, ಆಕಾರದಲ್ಲಿ ಚಿಕ್ಕದು; ತತ್ತ್ವ--ಸತ್ತ್ವಗಳಲ್ಲಿ ಚಿಕ್ಕದಲ್ಲ. ಅದೃಷ್ಟವಂತ ಧನಿಕನು ತನ್ನ ಬಡ ಸಹೋದರನಿಗೆ ನೆರವು ನೀಡುವಂತೆ, ಸಹಿಸುವ ನಿರ್ಧನನು ಬೆಳಕು ಕಾಣುವಂತೆ ಇಂಥ ಕೃತಿಗಳು ಅವರಿಗೆ ಮಾರ್ಗದರ್ಶಕವಾಗಲಿ.

ಕುಡ್ಪಿ ವಾಸುದೇವ ಶೆಣೈ.

ಶ್ರೀ

ಭಕ್ತ ಕುಚೇಲ

ಪಾತ್ರಗಳು

ಕುಚೇಲ.	ಶ್ರೀಕೃಷ್ಣ.
ಸೌದಾಮಿನಿ.	ರುಕ್ಮಿಣಿ.

ದೃಶ್ಯ ೧.

(ಕುಚೇಲನ ಗುಡಿಸಲು. ಒಳಗೊಂದೆಡೆ ಶ್ರೀಮನ್ನಾರಾಯಣ ಸ್ವಾಮಿಯ ವಿಗ್ರಹ. ಪೂಜೆಗಾಗಿ ಉರಿಸಲ್ಪಟ್ಟ ದೀಪವು ತೇಜೋಮಯವಾಗಿ ಪ್ರಜ್ವಲಿಸುತ್ತಿದೆ. ಕುಚೇಲ ಮತ್ತು ಅವನ ಹೆಂಡತಿ ಪ್ರಾರ್ಥನೆಮಾಡುತ್ತಿರುವರು.)

॥ ರಾಗ—ವಸಂತ್. ಝಂಪೆ ತಾಳ ॥

ದೇವ ಜಗದಾಧಾರ । ದೇವಾದಿನುತ ಚರಿತ ।
ಪಾವನ ಸುಗುಣ ಚರಿತ । ಭಾವಜನ ತಾತ ॥ ೧ ॥

ದುರುಳ ದಾನವ ಕಾಲ । ಶರಣುಜನ ಪರಿಪಾಲ ।
ಸಿರಿತುಲಸಿ ವನಮಾಲ । ಪೊರೆಯೊ ಗೋಪಾಲ ॥ ೨ ॥

ಕುಚೇಲ: (ಸ್ವಗತ) ಜನತಾ-ಜನಾರ್ಧನ, ಇನ್ನೆಷ್ಟು ಕಾಲ ನಾನೀ ಬಡತನದ ಬೇಗೆಯಲ್ಲಿ ಬಸವಳಿದು ನವೆಯಬೇಕು? ನೊಂದಲ್ಲಿಗೆ ನೋವು— ಬೆಂದಲ್ಲಿಗೆ ಬೇನೆ—ಹುಣ್ಣಿನ ಮೇಲೆ ತುರಿಕಜ್ಜಿಯೆಂಬಂತೆ ಬಡತನವೆಂಬ ಪೆಡಂಭೂತವು ಕಾಡುತ್ತಿದೆ—ಈ ಹಾಳು ಬಾಳನ್ನು. ವಿಧಾತನ ವಿಧಾನವೇ ಈ ರೀತಿಯಾಗಿದ್ದರೆ ನಾನೇನು ಮಾಡಲಿ? ಜೀವಿಗಳ ಸುಖದುಃಖದ ಅನುಭವದ ತಾಣವೇ ಈ ಜಗತ್ತು. ಕಾರ್ಮಣ ದೇಹವಿಡಿದು ಬಂದಿರತಕ್ಕ ಜೀವಿಗಳು ಪುರಾಕೃತ ಕರ್ಮಫಲಭೋಕ್ತೃಗಳಾಗಲೇ ಬೇಕು. ಅದು ಹೊರತು, ಬರಿದೆ ಮರುಗಿದೊಡೆ ಕರ್ಮದ ಕಟ್ಟಿನಿಂದ ಪಾರಾಗಲು ಶಕ್ಯವೆ? ಬರಲಿ; ಬಂದುದೆಲ್ಲ ಬರಲಿ–ಗೋವಿಂದಾ, ನಿನ್ನ ದಯೆಯೊಂದು ಎಂದೆಂದೂ

ಉಂಟಾಗದಿರಲಿ. ನಿನ್ನ ದಯೆಯಿರಲು, ಬಡತನವೇ ಸಿರಿತನವೆನಗೆ, ಭಕುತಬಂಧು!

ಸೌದಾಮಿನಿ: ಅಹುದು ಸ್ವಾಮೀ, ಬಪ್ಪುದು ತಪ್ಪದು. ಆದರೆ, ಪ್ರಚಲಿತ ಪ್ರಪಂಚದ ಆಗುಹೋಗುಗಳ ಬಗೆಯೋ ಹೀಗಿದೆ. ಅಲ್ಪಮತಿಗಳಲ್ಲಿ ಸಾಕಷ್ಟು ಸಂಪತ್ತು-ಧಾರ್ಮಿಕರ ನಿಲಯದಲ್ಲಿ ಕಡು ಬಡತನ—ಸಾಧು ಸಜ್ಜನರಿಗೆ ಅಲ್ಪಾಯುಷ್ಯ-ಅನ್ಯಾಯ ಅಕೃತ್ಯಗಳನ್ನೆಸಗುತ್ತಿರುವ ದುರ್ಜನರಿಗೆ ದೀರ್ಘಾಯುಷ್ಯ. ಆದರೆ, ಹೇಳುವ ಅಧಿಕಾರ ನಮಗೆಲ್ಲಿ? ಕೊಡುವ ಒಡೆಯನು ಹಿರಿಯನು, ಪಡೆವ ಮನುಜನು ಕಿರಿಯನು.

ಕುಚೇಲ: ನಿಜ ಸೌದಾಮಿನಿ; ನೊಸಲಲ್ಲಿ ಬರೆದುದು ಎಸಳಲ್ಲಿ ಪೂಸಲು ಮಾಸುವುದೆ? ಆಗುವುದನ್ನು ಆಗದಿರಿಸಲು ಆಗುವುದಿಲ್ಲ. ಯಾವುದೋ ಒಂದು ಅವ್ಯಕ್ತಶಕ್ತಿ ನಮ್ಮನ್ನು ನಡೆಸುತ್ತಿದೆ. ಅದನ್ನು ಮೀರುವುದು ಯಾರಿಂದಲೂ ಸಾಧ್ಯವಿಲ್ಲ. ಇದನ್ನು ತಿಳಿದವರು ವಿಧಿಸುವ ವಿಧಾತನೊಡನೆ "ನಾಳೆ ಬಪ್ಪುದು ನಮಗೀದಿನ ಬರಲಿ; ಇಂದು ಬಪ್ಪುದು ನಮಗೀಗಲೆ ಬರಲಿ" ಎಂದು ಬೇಡುತ್ತಿದ್ದಾರೆ. ನೋಡು, ಪ್ರಕೃತಿಯು ಮೂಲತಃ ದ್ವಂದ್ವ ನಿರ್ಮಿತ. ಪುರಾತನದ ಅಳಿವು ನೂತನದ ಆವಿಷ್ಕಾರ. ಕ್ರಾಂತಿಯು ಶಾಂತಿಯ ಮೂಲ. ಸುಖವು ದುಃಖದ ಮೂಲ; ದುಃಖವು ಸುಖದ ಮೂಲ. ದುಃಖದ ಮುಕುಟವನ್ನು ಧರಿಸಿಕೊಂಡು ಅರ್ಥಾತ್ ಹೊತ್ತುಕೊಂಡು ಸುಖವು ವ್ಯಕ್ತಿಯ ಬಳಿಗೈದುವುದಂತೆ, ಸುಖವನ್ನಾಶಿಸುವವರು ದುಃಖದ ಹೊರೆಯನ್ನು ಮೊದಲು ಕೆಳಗಿಳಿಸಲೇ ಬೇಕಂತೆ; ಹೀಗಿರುವಾಗ ಸುಖದ ಸುಗ್ಗಿಯ ಸುದಿನ ನಮ್ಮನ್ನೇಕೆ ಕಾದು ನಿಂದಿರಬಾರದು?

ಸೌದಾಮಿನಿ: ಆದರೆ, "ಹುಟ್ಟಿಸಿದ ದೇವರು ಹುಲ್ಲು ತಿನಿಸ್ಯಾನೆ?" ಎಂದು ನೆನಸಿ ಮಾನವನು ಸುಮ್ಮನಿದ್ದರೆ ಜೀವನ ಸಾಗಬಹುದೇ? ಮಗುವು ಕೂಗಿದಾಗಲೇ ಮಾತೆಯು ಮೊಲೆಯೂಡಿಸುವುದು ರೂಢಿ. ಮಗುವು ಸುಮ್ಮನಿರಲು ತಾಯಿಯೂ ಸುಮ್ಮನಿರುವಳು. ತಾಯಿಯು, ತನ್ನ ಮಗುವು ಮರುಗದಿದ್ದಾಗ ಹಾಲುಣಿಸುವುದೇ ಇಲ್ಲವೆಂದಲ್ಲ. ತನಗೆ ನೆನಪಾದಾಗ, ಸ್ತನದಿಂದ ದುಗ್ಧವು ಉಣ್ಮಿ ಪೊಣ್ಮಲು ಉಣಿಸ್ಯಾಳು.

ಕುಚೇಲ: ಸೌದಾಮಿನೀ, ಈಗ ನಾನೇನು ಮಾಡಬೇಕೆನ್ನುವೆ? ನಿನ್ನ ಮಾತಿನ ಅರ್ಥದಂತೆ, ನಾನು, ನನಗಾಗಿ ಯಾ ನನ್ನವರಿಗಾಗಿ ಯಾರನ್ನೋ ಕೇಳಬೇಕಾಗಿದೆ. ಆಗಲಿ; ಯಾರವರು? ಸರಿಯಾಗಿ ಹೇಳು!

ಸೌದಾಮಿನಿ: ಶ್ರೀಕೃಷ್ಣನೂ ನೀವೂ ಬಾಲ್ಯಸ್ನೇಹಿತರು; ಜತೆಗೆ ವಿದ್ಯಾರ್ಜನೆ ಮಾಡಿದವರು ಎಂದು ನೀವು ಆಗಾಗ ಹೇಳುತ್ತಿದ್ದಿರಲ್ಲಾ? ಅವನು ಅರಸುಕುವರನು. ಸಾಲದುದಕ್ಕೆ ಶ್ರೀಮನ್ನಾರಾಯಣನೇ ಅವತಾರವೆತ್ತಿ ಬಂದ ಮಹಾಪುರುಷನೆಂದು ಜನಜನಿತವಾಗಿದೆ, ಭಕ್ತಬಂಧು, ದೀನಜನಪರಿಪಾಲ, ಆರ್ತಶರಣ್ಯನೆಂದು ಖ್ಯಾತಿಹೊಂದಿದ್ದಾನೆ. ಅದೆಷ್ಟೋ ಪವಾಡ ಕೃತಿಗಳನ್ನೆಸಗಿ, ಈಗಾಗಲೇ ಜಗದ್ವಂದ್ಯ ವಿಭೂತಿಯಾಗಿದ್ದಾನೆ. ಆರ್ತರಾಗಿ ಪ್ರಾರ್ಥಿಸುವವರ ಪ್ರಾರ್ಥನೆಯನ್ನು ಪೂರ್ತಿಗೊಳಿಸುವವನೆಂಬ ಕೀರ್ತಿ ಅವನಿಗೇ ಮೀಸಲು. ಈ ಸಮಯ ಆ ಭಕ್ತಜನಮನೋವಲ್ಲಭನ ಸಹಾಯವನ್ನೇಕೆ ಬಯಸಬಾರದು? ತಮ್ಮ ಎಳವೆಯ ಕೆಳೆಯನಾಗಿದ್ದು, ಸಹಾಯ ಕೋರಲು ಸಿಗ್ಗಾಗುವುದೆಂದೇ ಊಹಿಸೋಣ. ಅವನನ್ನೊಮ್ಮೆ ಕಂಡು, ಈ ಬಡತನದ ಚಿತ್ರಣವನ್ನಾದರೂ ತೋರಿಸಬಹುದಲ್ಲಾ!

ಕುಚೇಲ: (ಸ್ವಗತ) ನಿಜ; ಕೃಷ್ಣನು ನನ್ನ ಗೆಳೆಯ. ಮಹಾಮಹಿಮ. ದೇಹೀ ಎನ್ನುವವರಿಗೆ ನಾಸ್ತಿಯೆನ್ನುವ ಪರಿಪಾಠ ಅವನಿಟ್ಟುಕೊಂಡಿಲ್ಲ. ನಾನಂತೂ ಗೆಳೆಯ. ಸೌದಾಮಿನಿಯ ಸಲಹೆ ಯುಕ್ತವಾದುದು. (ಪ್ರಕಾಶ) ಸೌದಾಮಿನೀ, "ಪ್ರಭುವಿನ, ಪರಮಾತ್ಮನ, ಸಾಧು ಸಜ್ಜನರ ದರ್ಶನಕ್ಕೆ ಹೋಗುವಾಗ ರಿಕ್ತ ಹಸ್ತದಿಂದ ಹೋಗಲಾಗದು" ಎಂದು ಶಾಸ್ತ್ರನಿಯಮ, ಹೀಗೆಯೇ ಹೋಗಲೇನು? ನಮ್ಮಲ್ಲೇನು ಇದೆ?

ಸೌದಾಮಿನಿ: ಹೋ, ಹಾಗೇನು? (ಕ್ಷಣ ಯೋಚಿಸಿ) ಒಳಗೇನಾದರೂ ತಿಂಡಿಯಿದೆಯೋ ನೋಡುವೆ. (ಒಳಗೆ ಹೋಗಿ ಸ್ವಲ್ಪ ಅವಲಕ್ಕಿ ತರುವಳು) ಇಕೊಳ್ಳಿ, ನಿನ್ನೆ,—ನೆರೆಮನೆಯವರು ಕೊಟ್ಟ ಅವಲಕ್ಕಿಯಲ್ಲಿ ಇಷ್ಟು ಮಾತ್ರ ಉಳಿದಿದೆ. ಇದನ್ನೆ ಕೊಂಡುಹೋಗಿರಿ. ದೀನರಾದ ನಮ್ಮಲ್ಲಿ ಇದರಿಂದ ಹೆಚ್ಚೇನಿದೆ? ಯಾವಾಗ ಶ್ರೀಕೃಷ್ಣನು ಅವತಾರ ಪುರುಷನಾಗಿರುತ್ತಾನೋ, ಆಗ ಕೊಡುವವನೂ ಅವನೇ. ಸ್ವಲ್ಪವಾಗಲಿ, ಹೆಚ್ಚಾಗಲಿ,

ಆವನಿತ್ತುದನ್ನು ಅವನಿಗೊಪ್ಪಿಸಿ ಕೃತಕೃತ್ಯರಾಗುವುದು ನಮ್ಮ ಕರ್ತವ್ಯ. ಅದಕ್ಕಾಗಿ ನಾಚಬೇಕಾಗಿಲ್ಲ. ನಿಮ್ಮ ಹೊದ್ದುಕೊಳ್ಳುವ ಪಂಚೆಯ ತುದಿಗೆ ಕಟ್ಟಿದ್ದೇನೆ. ಇನ್ನು ಕಾಲವಿಳಂಬವಮಾಡಬೇಡಿರಿ. ಈ ನಮ್ಮ ದೀನದೆಸೆಯನ್ನು ಆ ದಯಾಮಯನು ಕಾಣಲಿ.

ಕುಚೇಲ: ಆಗಲಿ; ಬಹುಬೇಗನೆ ಹಿಂದಿರುಗಿ ಬರುವೆ. ಮಕ್ಕಳು ಮರಿಗಳನ್ನು ಎಚ್ಚರದಿಂದ ನೋಡುತ್ತಿರು.

ಸೌದಾಮಿನಿ: ಪ್ರಯಾಣವು ಮಂಗಲಕರವಾಗಲಿ. ದಯಾಮಯನ ತುಂಬು ಕೃಪೆಯಿರಲಿ!

(ಪರದೆ ಬೀಳುವುದು.)

ದೃಶ್ಯ ೨.

(ಬೀದಿ. ಕುಚೇಲನು ಹೋಗುತ್ತಿರುವನು. ಅವನ ಮನೋಭಾವನೆ ಹಾಡಾಗಿ ಹರಿಯುತ್ತದೆ.)

ಕುಚೇಲ: ॥ ರಾಗ: ಭೂಪಾಳಿ: ಆದಿತಾಳ ॥

(ಧಾಟಿ: ಹಾ ವಿಧೀ)

ವಿಧಿಲೀಲೆಯ ಸಹಿಸೆ । ಅಕಟಾ ॥ ಪ ॥
ಬಡತನವೆಂಬೋ । ಬಾಧೆಗೆ ಸಿಲುಕಿ ।
ಬಡವಾಗಿಹೆನಕಟ । ಅಕಟಾ ॥ ೧ ॥
ಪದನಂಬಿಹೆ ತವ । ಮದನಜನಕನೆ ।
ಮುದದಿ ಸಲಹೊ ನಿರತ । ಅಕಟಾ ॥ ೨ ॥

ಹಾಯ್! ಜಗಜ್ಜನಕ! ನಿನ್ನನ್ನು ಕಾಣಬೇಕೆಂಬ ಕಾಂಕ್ಷೆಯಿಂದ, ಬಹು ದೂರದಿಂದ ಬಂದಿರುವೆ. ಯಾವಾಗ ನಿನ್ನ ಸನ್ನಿಧಾನವನ್ನು ಸೇರುವೆನೋ, ಯಾವಾಗ ನಿನ್ನ ಮಾಂಗಲ್ಯಮೂರ್ತಿಯನ್ನು ಕಣ್ದಣಿಯೆ ಕಂಡು ನಯನಾನಂದಗೊಳ್ಳುವೆನೋ, ಯಾವಾಗ ನಿನ್ನನ್ನು ನುತಿಸಿ ಪಾವನನಾಗುವೆನೋ, ಯಾವಾಗ ನಿನ್ನ ಮಧುರ ಮುರಲೀಗಾನದಿಂದ ಕರ್ಣಾನಂದ ಹೊಂದುವೆನೋ, ಯಾವಾಗ ನಿನ್ನ ಕೊರಳಲ್ಲಿ ಘಮಘಮಿಪ ಸಿರಿತುಲಸಿ

ವನಮಾಲೆಯ ಕಂಪಿನಿಂದಾಗಿ ರೋಮಾಂಚನಗೊಳ್ಳುವೆನೋ, ಅದಾವಾಗ ನಿನ್ನ ವಾತ್ಸಲ್ಯದ ಆಲಿಂಗನದ ಬಿಸುಗೆಯಲಿ ಬೆರೆತು, ನಿಜಭಾವವನೆ ಮರೆತು, ಪಂಚೇಂದ್ರಿಯತೃಪ್ತಿಯನ್ನು ಹೊಂದುವೆನೋ ತಿಳಿಯದು. ಆ ಭಾಗ್ಯವು ನನ್ನ ಪಾಲಿಗೆ ಲಭ್ಯವಾಗುವುದೋ ಅರಿಯದು. ಬಾಲ್ಯದ ಕೆಳೆತನವನ್ನು ಮರೆತಿರುವೆಯಾ? ಒಂದುವೇಳೆ ಪರಿಚಯವಿದ್ದೂ ಇಲ್ಲದವನಂತೆ ಸುಮ್ಮಗಾಗುವೆಯಾ? (ಯೋಚಿಸಿ) ಇಲ್ಲ; ನೀನು ಸುಸಂಸ್ಕೃತನು. ಭಕ್ತವತ್ಸಲನು. ಮರೆಯಲಾರೆ ಎಂಬ ನಂಬುಗೆ ನನಗಿದೆ.

(ಸ್ವಲ್ಪ ಮುಂದರಿಯುವನು)

ಹಾ! ನಾನು ನಡೆದು ನಡೆದು ಬಂದುದೆಲ್ಲಿಗೆ? ಇದೇ ಅಲ್ಲವೆ ದ್ವಾರಕೆಯ ಉದ್ಯಾನವು? ಹೂ ಹಣ್ಣು ಹೀಚು ಕಾಯಿಗಳಿಂದ ತುಂಬಿರುವ ವೃಕ್ಷಗಳು! ಕೆಲವೊಂದು ಮರವನ್ನು ಬೆಳಗುತ್ತಿರುವ ಲತಾವಿತಾನಗಳು! ಯಾವ ಸುಂದರತೆ! ಏನದರ ಬಂಧುರತೆ! ತಿಳಿನೀರ ಕೊಳಗಳಲಿ ಬೆಳೆದರಳಿ ಪರಿಮಳವ ಬೀರುತಿಹ ನಳಿನಾವಳಿ! ಮಧುವ ನೀಂಟಲ್ ಮನವಾಡಿ ಬಂದೆರಗುವ ಭೃಂಗಾವಳಿ! ನೋಡಲೇನಾ ಚೆಂದ! ಕೊಡುತಿಹುದು ಮನಕಾನಂದ!

ತುಂಬಿವಿಂಡುಗಳು ಎಡೆಬಿಡದೆ ಬರುತ್ತಿವೆಯಾದರೂ ಒಂದಾದರೂ ನಿರಾಶೆಯಿಂದ ಹಿಂದಿರುಗುತ್ತಿರುವುದೇ? ಅಸಂಖ್ಯ ಕಮಲಗಳಿನ್ನೂ ಭ್ರಮರಗಳನ್ನು ಆಹ್ವಾನಿಸುತ್ತವೆ. ಏನವುಗಳ ನಿಸ್ವಾರ್ಥಸೇವೆ! ಇದರಿಂದಲೆ ವ್ಯಕ್ತವಾಗುವುದು: “ಇಲ್ಲಿಗೆ ಬಂದವರಾರೂ ನಿರಾಶೆಯಿಂದ ಹಿಂದಿರುಗುತ್ತಿಲ್ಲ”ವೆಂದು. ಇಲ್ಲಿನ ಗಿಡ-ಮರ ಬಳ್ಳಿ-ಪೊದರುಗಳಿಗೂ ಬಡತನವೆಂಬುದಿಲ್ಲ. ಒಂದನ್ನೊಂದು ಎಷ್ಟೊಂದು ಪ್ರೇಮಪೂರ್ಣವಾಗಿ ಕಾಣುತ್ತಿವೆ! ಎಷ್ಟೊಂದು ಸ್ನೇಹಸೌಹಾರ್ದತೆಯಿಂದಿದ್ದು ಪಡಿಬಯಸದ ದುಡಿಮೆಯನ್ನೆಸಗುತ್ತಿವೆ! ಗುರುಕುಲದಲ್ಲಿದ್ದು ಒಂದು ವರುಷ ಕಲಿಯಬೇಕಾದುದು— ವಿಚಾರಶೀಲನಾದವನಿಗಿಲ್ಲಿ ಅತ್ಯಲ್ಪ ಸಮಯದಲ್ಲಿ ಕಲಿಯಬರುವುದು. ಧನ್ಯನಾದೆ! ಭೂದೇವೀ, ನಿನಗಿದೋ ವಂದನಂ! (ಸ್ವಲ್ಪ ಮುಂದೆ ಹೋಗಿ)

ಹೋ! ಅಲ್ಲಿ ಕಾಣುತ್ತಿರುವುದೇ ಕೃಷ್ಣಸರಮನೆಯಲ್ಲವೆ? ನಿಜ; ನಿಜ. ಶುಭ್ರಶೀತಲ ಚಂದ್ರಕಿರಣಗಳು ಬಿಳಿನೊರೆಯ ತೆರೆಗಳನ್ನು

ವಾರಿಧಿಯು ತಟಕ್ಕೊಯ್ಯುವಂತೆ, ನನ್ನ ಮನಸ್ಸು ಈ ವಾತಾವರಣದಲ್ಲಿ ಹೇಗಾಗಿರುವುದೋ ಹೇಳಲಸಾಧ್ಯ. (ಸ್ವಲ್ಪ ಮುಂದೊತ್ತಿ) ಅರಮನೆಯನ್ನು ಸೇರಲೆ? ಹೂಂ, ಬಾಗಿಲ ಚರರನ್ನು ವಿಚಾರಿಸಿಯೇ ಪ್ರವೇಶ ಮಾಡುವೆನು. (ಫರದೆ ಬೀಳುವುದು.)

ದೃಶ್ಯ ೩.

(ದ್ವಾರಕೆ, ಶ್ರೀಕೃಷ್ಣನು ಆಸೀನನಾಗಿದ್ದಾನೆ. ರುಕ್ಮಿಣಿಯು ಬಂದು ವಾಮ ಭಾಗದಲ್ಲಿ ಕುಳಿತುಕೊಳ್ಳುತ್ತಾಳೆ.)

ಶ್ರೀಕೃಷ್ಣ: ರುಕ್ಮಿಣೀ, ಬಂದೆಯಾ? ಮನಕ್ಕೆ ಆನಂದವನ್ನು ತಂದೆಯಾ?

ರುಕ್ಮಿಣಿ: (ಕೃಷ್ಣನ ಮೋರೆಯನ್ನೇ ಕ್ಷಣಕಾಲ ಈಕ್ಷಿಸಿ) ಸ್ವಾಮಿ, ಇದೇನು ಯೋಚನಾಪರ ಮುಖಮುದ್ರೆ?

ಶ್ರೀಕೃಷ್ಣ: ರುಕ್ಮಿಣೀ, ಜಗತ್ತಿನ ಜನತಾಜೀವನದಲ್ಲಿನ ಅಧರ್ಮದ ಅಂಕುರವನ್ನು ಕಿತ್ತೊಗೆದು, ಧರ್ಮದ ಬಿತ್ತನೆಯನ್ನು ಬಿತ್ತಿ, ಸತ್ಯ ಧರ್ಮ ಶಾಂತಿಗಳನ್ನು ನೆಲೆಗೊಳಿಸಬೇಕೆಂಬ, ಉದಾತ್ತಧ್ಯೇಯದಿಂದ ಉತ್ತೇಜಿತನಾದ ನಾನು, ಮಾನವ ಉದರಾಂಬುಧಿಯಲ್ಲಿ ಬೆಳಕಿಗೆ ಬಂದವನಂತೆ ತೋರಿ, ಲೋಕಸೇವೆಯ ಹೊರೆಯನ್ನು ಹೊತ್ತುಕೊಂಡಿರುವೆ. ಈತನಕ ಗೋಪಿಕಾಸ್ತ್ರೀಯರಿಂದ ಪರಿವೇಷ್ಟಿತನಾಗಿ ಮಧುರ ಮುರಲೀಗಾನದಿಂದ ಚರಾಚರ ಸೃಷ್ಟಿಯನ್ನು ನಲಿಸಿದ ಲಲಿತಕೃಷ್ಣನನ್ನು ಜನರು ಕಂಡಿರುವರು. ಕಂಸ, ಧೇನುಕ, ಕೇಶಿ, ಶಿಶುಪಾಲಾದಿ ದಾನವರನ್ನು ಲೀಲಾಜಾಲವಾಗಿ ಸದೆಬಡಿದಾಗ ಅದೇ ಜನರ ಹೃದಯವು ಕಂಪಿಸಿರುವುದಲ್ಲದೆ, ಕೃಷ್ಣನ ಹುಟ್ಟಿನ ಗುಟ್ಟನ್ನರಿತರು. ಆ ಬಳಿಕ ಕೌರವ ಪಾಂಡವರ ಯುದ್ಧಕಾಲದಲ್ಲಿ ಭಾವ ಬಿಯ್ಯಗನ ಬಂಡಿಯ ಬೋವನಾಗಿ ಬವರ ಬಯಲಿನಲ್ಲಿ ಭೀರುವಾಗಿ ನಿಂತ ಭಾವ ಅರ್ಜುನನಿಗೆ ಬೋಧಿಸಿದ ಬೋಧನೆಯು ಭಗವದ್ಗೀತೆಯೆಂದು ಪರಿಗಣಿಸಲ್ಪಟ್ಟು ಮಾನವಧರ್ಮದ ಪರಾಕಾಷ್ಠೆಯನ್ನು ಬೋಧಿಸುವುದಾದರೂ, ಜಗದ ಒಳಿತನ್ನು ಬಯಸುವ ನಾನು ಇನ್ನೆಷ್ಟೋ ಕಾರ್ಯವನ್ನು ಮಾಡಬೇಕಾಗಿದೆ. ತನ್ಮೂಲಕ ಚಿರಶಾಂತಿಯನ್ನು ನೆಲೆಗೊಳಿಸಬೇಕಾಗಿದೆ.

ರುಕ್ಮಿಣಿ: ಸ್ವಾಮಿ, ಏನು, ಏನು? ಯಾರಲ್ಲಿ ಯುದ್ಧವಾಡಲಿಕ್ಕಿದೆ? ಯುದ್ಧಕ್ಕೆ ಹೋಗುವಿರೆನ್ನುವಿರಾದರೆ ನಾನು ಹೋಗಗೊಡುವುದಿಲ್ಲ. ಹಿಂಗಿದ ಹರೆಯುದಲ್ಲೂ ಧುರಕಾಂಕ್ಷೆಯೆ? (ಕೃಷ್ಣನ ಕೈಯ್ಯಲ್ಲಿದ್ದ ಸುದರ್ಶನ ತೆಗೆದುಕೊಳ್ಳುವಳು.)

ಕೃಷ್ಣ: ॥ ರಾಗ, ಸಾರಂಗ; ಝುಂಪೆತಾಳ ॥

ಏಕಿನಿತು ಕೋಪ । ಸಾಕುಯೀತಾಪ ॥ ಪ ॥

ತಿಳಿದಿಲ್ಲವೇನೊಯೀ । ಭಟನ ಆಟೋಪ ।
ಕಳೆದೊಗೆಯಲಾರೆಯೋಂ । ಮನದ ಪ್ರಲಾಪ ॥ ೧ ॥

ದೇವೀ, ಪ್ರಾಯವಾಯಿತೆಂದು ಹೇಳುತ್ತಾ, ಕುಪಿತಳಾಗುವೆಯಾ?

ರುಕ್ಮಿಣಿ: (ಕೃಷ್ಣನ ಮನೋಗತ ತಿಳಿದವಳಾಗಿ, ಅವನ ಔದಾಸೀನ್ಯ ನಿರಸನಕ್ಕಾಗಿ ದ್ವಯಾರ್ಥದ ಮಾತು ಉಪಯೋಗಿಸುವಳು). ಇಲ್ಲ; ನಾನು ಕುಪಿತಳಾಗಿಲ್ಲ. ನೀನೇ ಭೂಮಿಯ ತಂದೆ.

ಶ್ರೀಕೃಷ್ಣ: ಹಾಗಾದರೆ, ನೀನು ಕುಮಾತಾ, ಭೂಮಿಯ ತಾಯಿ.

ರುಕ್ಮಿಣಿ: ನಾನಲ್ಲ ಕು-ಮಾತಾ, ನೀನೇ ಭೂಮಿಯನ್ನಳಿಯಬಲ್ಲವನು.

ಶ್ರೀಕೃಷ್ಣ: ದೇವೀ, ನೀನು ಪರಿಹಾಸ್ಯಕೇಳಿಯಲ್ಲಿ ಅನಂತಳು.

ರುಕ್ಮಿಣಿ: ನಿಮ್ಮನ್ನಲ್ಲವೆ ಅನಂತನೆಂದು ಕರೆಯುತ್ತಿರುವುದು?

ಶ್ರೀಕೃಷ್ಣ: (ರುಕ್ಮಿಣಿಯ ಗಲ್ಲ ಕುಲುಕಿಸುತ್ತಾ) ಬಹು ಜಾಣೆ ನೀನು.

ರುಕ್ಮಿಣಿ: (ದೂರದಿಂದ ಬರುತ್ತಿರುವ ವ್ಯಕ್ತಿಯನ್ನು ನೋಡಿ ನಾಚುಗೆಯಿಂದ) ನೋಡಿ, ಆದಾರು ಬರುತ್ತಿರುವುದು? ಸ್ವಲ್ಪ ಸುಮ್ಮನಿರಿ.

(ಕುಚೇಲನು ಬರುತ್ತಿರುವನು. ಕೃಷ್ಣನು ಆಸನದಿಂದಿಳಿದು ಹೋಗಿ ಆಲಿಂಗಿಸುವನು. ಇಬ್ಬರೂ ಒಂದು ಕ್ಷಣ ಮೌನ.)

ಕೃಷ್ಣ: ॥ ರಾಗ ಪಹಾಡಿ; ತ್ರಿತಾಲ ॥

ಬಂದೆಯೋ ಮಮ । ಗೆಳೆಯನೆ ನೀನು ।
ಬಂಧುಗಳೆಲ್ಲರು । ಕುಶಲವೆಯೇನು ॥ ೧ ॥

ತಂದೆಯೋ ನೀ । ತಿಂಡಿಯನೇನು ।
ತಂದಿರೆ ಕೊಡು ನೀ । ತಿನ್ನುವೆ ನಾನು ॥ ೨ ॥

ಬಾ ಮಿತ್ರಾ, ಕುಳಿತುಕೊಳ್ಳು. ನೀನು ಬರುತ್ತಿಯೆಂದು ಮೊದಲೇ ನನಗೇಕೆ ತಿಳಿಸಲಿಲ್ಲ? ಕಾಣದೆ ಬಹುಸಮಯವಾಯಿತು. ಚಿಕ್ಕಂದಿನಲ್ಲಿ ಜತೆಗೆ ಗುರುಕುಲದಲ್ಲಿದ್ದೆವು. ಆಗಿನ ವಾತಾವರಣವೇ ಬೇರೆ— ಈಗಿನ ಪರಿಸ್ಥಿತಿಯೇ ಪ್ರತ್ಯೇಕ. ನಾನೇ ಅತ್ತ ಬರೋಣವೆಂದರೆ ನನಗಂತೂ ಅರೆಕ್ಷಣ ತೆರವೆಂಬುದೇಯಿಲ್ಲ. ಕಾಣುವವರಿಗೇನೋ ಕೃಷ್ಣನು ವಿಲಾಸ ಪ್ರಿಯ. ತತ್ವತಃ ಹಾಗಿಲ್ಲ. ನೀನಂತೂ ಈ ಕಡೆ ಬರಲೇ ಇಲ್ಲ. ಆಗಲಿ, ಚಿಂತಿಲ್ಲ. ಏನು, ಗೃಹಸ್ಥಾಶ್ರಮವನ್ನು ಕೈಗೊಂಡಿರುವೆಯಾ? ಮಡದಿ ಅನುಕೂಲೆಯಾಗಿರುವಳೆ? ಮಕ್ಕಳಾಗಿರುವರೆ? ಏನು ವಿಶೇಷ?

ಕುಚೇಲ: ಕೃಷ್ಣಾ, ಗೃಹಸ್ಥಾಶ್ರಮವನ್ನು ಕೈಗೊಂಡಿರುವೆನು. ಮಡದಿಯೂ ಅನುಕೂಲೆಯಾಗಿರುವಳು. ಮಕ್ಕಳೂ ಆಗಿರುವರು.

ಶ್ರೀಕೃಷ್ಣ: ಬಹು ಸಂತೋಷ. ಪರಮಾತ್ಮನು ರಚಿಸಿದ ರಂಗಸ್ಥಲವೇ ಸಂಸಾರ. ಆತ್ಮನು ಕರಣಂಗಳೊಡನೆ ಹೂಡಿದ ಹೋರಾಟವೇ ಸಂಸಾರ. ಸಂಸಾರದ ಸಾರಾಸಾರವ ತಿಳಿದು, ನಿತ್ಯದ ಗೊತ್ತಿನ ಸೂತ್ರನ್ನರಸುತ್ತಾ ಜೀವನ ಸಾಗಿಸಬೇಕು ಮಾನವ. ಇಹ ಮುಕ್ತಿಯನ್ನು ಪಡೆಯಲು ಸಂಸಾರವೊಂದಲ್ಲದೆ ಬೇರೆ ಮಾರ್ಗವಿಲ್ಲ. (ಸ್ವಲ್ಪ ಯೋಚಿಸಿ) ಹಾಂ, ನೋಡು, ಚಿಕ್ಕಂದಿನಲ್ಲಿ ನನಗೆ ಯಾವಾಗಲೂ ತಿಂಡಿ ತಂದು ಕೊಡುತ್ತಿದ್ದೆಯಲ್ಲಾ! ಅದೆಷ್ಟು ರುಚಿ! ನನಗೆ ಆಗಾಗ ನೆನಪಾಗುತ್ತಿದೆ. ಏನಾದರೂ ತಂದಿರುವೆಯಾ?

ಕುಚೇಲ: (ತಗ್ಗಿದ ಮೋರೆಯನ್ನೆತ್ತದೆ) ಏನೂ ತರಲಿಲ್ಲ.

ಶ್ರೀಕೃಷ್ಣ: ಛೆ! ಛೆ! ಹಾಗೇಕೆನ್ನುವೆ? ಏನಾದರೂ ತಾರದಿರುವೆಯಾ? ಚಿಕ್ಕಂದಿನ ನೆನಪು ಮರೆತು ಹೋಯಿತೆ?

ಕುಚೇಲ: (ಕುಚೇಲನು, ಮಹಾಮಹಿಮನಿಗೆ ತಾನು ತಂದಿದ್ದ ಸ್ವಲ್ಪ ಅವಲಕ್ಕಿಯನ್ನು ಕೊಡಲು ನಾಚುಗೆಯಾಗಿ ಸುಮ್ಮನೆ ಕೂತುಬಿಟ್ಟಿದ್ದಾನೆ.)

ಶ್ರೀಕೃಷ್ಣ: (ಕುಚೇಲನ ಮನೋಗತ ತಿಳಿದು) ಮಿತ್ರಾ, ತಲೆಯನ್ನೇಕೆ ತಗ್ಗಿಸಿರುವೆ? ನಾಚುಗೆಯೆ? ನಿನ್ನ ಕಂಕುಳಲ್ಲಿ ಅದೇನು ಬಚ್ಚಿಟ್ಟಿರುವೆ?

(ಕಂಕುಳಿಗೆ ಕೈಹಾಕುವನು. ಗಂಟು ಕೆಳಗೆ ಬೀಳುವುದು. ಒಳಗಿದ್ದ ಅವಲಕ್ಕಿ ತೆಗೆದು ತಿನ್ನುವನು.)

ರುಕ್ಮಿಣಿ: (ಮುಗುಳ್ನಗುತ್ತಾ) ಹೂಂ; ನಿಮ್ಮನ್ನು ಉಂಡಾಡಿ ಭಟ್ಟನೆನ್ನುವುದು ಇದಕ್ಕೇನೆ!

ಶ್ರೀಕೃಷ್ಣ: ಏನೇ? ಎಷ್ಟು ಕುಚೋದ್ಯ! ಚಿಕ್ಕಂದಿನ ಸಲುಗೆ. ನಿನಗೇನು ಗೊತ್ತು ಈ ಅವಲಕ್ಕಿಯ ರುಚಿ! ಇಗೋ; ಸ್ವಲ್ಪ ತಿಂದು ನೋಡು. (ರುಕ್ಮಿಣಿಗೆ ಒಂದು ಹಿಡಿ ಕೊಡುವನು. ಅವಳು ತಿನ್ನುವಳು.)

ರುಕ್ಮಿಣಿ: ಬಹು ಚೆನ್ನಾಗಿದೆ ಸ್ವಾಮೀ. ಇವನ ಹೆಸರೇನು?

ಶ್ರೀಕೃಷ್ಣ: ರುಕ್ಮಿಣಿ, ಇವನ ಹೆಸರು ಸುದಾಮನೆಂದು. ಚಿಕ್ಕಂದಿನಲ್ಲಿ ನಾವೆಲ್ಲರೂ ಸೇರಿ, ತಮಾಷೆಗಾಗಿ ಕುಚೇಲನೆಂದು ಕರೆಯತೊಡಗಿದೆವು. ಅದೇ ಹೆಸರು ಮುಂದೆ ಸ್ಥಿರವಾಗಿಬಿಟ್ಟಿತು. ಬಹುದೂರದಿಂದ ಬಂದಿದ್ದಾನೆ. ನೋಡಲಿ ಎಲುಬು ಕಾಣುವ ದೇಹ. ಹಸಿವು ತೃಷೆಗಳಾಗಿರಬಹುದು. ಭೋಜನ ಗೃಹಕ್ಕೆ ತೆರಳೋಣ. (ಮೂವರೂ ಹೋಗುವರು.)

[ಕುಚೇಲನು ಕೃಷ್ಣನ ಅರಮನೆಯಲ್ಲಿದ್ದು ಕೆಲವು ದಿನ ಸುಖವನ್ನನುಭವಿಸಿದ್ದಾನೆ. ಆದರೆ ತನ್ನ ಬಡ ಗುಡಿಸಲನ್ನು ಮರೆತಿಲ್ಲ. ಶ್ರೀಕೃಷ್ಣನಲ್ಲಿ ಮನಬಿಚ್ಚಿ ಸಹಾಯ ಕೇಳಲು ಸಿಗ್ಗಾಗಿದೆ. ಮನೆಯ ದೀನ ದೆಸೆ ಕಣ್ಮುಂದಾಡುತ್ತಾ ಮನೆಯತ್ತ ಕರೆಯುತ್ತಿದೆ.]

ಕುಚೇಲ: ಕೃಷ್ಣಾ, ಮನೆಯಿಂದ ಹೊರಟು ಬಂದು ಬಹುದಿವಸಗಳಾದುವು. ಮಕ್ಕಳು ಮರಿಗಳು ಹೇಗಿರುವರೋ! ಹೋಗಿ ಬರುತ್ತೇನೆ. ಬಡಮಿತ್ರನನ್ನು ಮರೆಯಬೇಡ ಕೃಷ್ಣಾ.

ಶ್ರೀಕೃಷ್ಣ: ಆಗಲಿ ಮಿತ್ರಾ, ಆಗಾಗ ಬರುತ್ತಿರು. ನಿನ್ನ ಜೀವನ ಸುಖಮಯವಾಗಲಿ.

ರುಕ್ಮಿಣಿ: (ಕುಚೋದ್ಯಕ್ಕಾಗಿ) ಬರುವಾಗ ಸ್ವಲ್ಪ ಅವಲಕ್ಕಿ ತರಲಿಕ್ಕೆ ಹೇಳಿ.

ಕುಚೇಲ: ಅಮ್ಮಾ, ಹೋಗಿಬರುತ್ತೇನೆ. ಕರುಣೆಯಿರಲಿ.

ರುಕ್ಮಿಣಿ: ನಿನಗೆ ಮಂಗಲವಾಗಲಿ. (ಕುಚೇಲನು ಹೋಗುವನು.)

ಶ್ರೀಕೃಷ್ಣ: ನೋಡಿದೆಯಾ ರುಕ್ಮಿಣಿ, ಕುಚೇಲನ ನಿರ್ವ್ಯಾಜ ಅಂತಃಕರಣವನ್ನು? ಅವನ ಮಾತು ಎಷ್ಟೊಂದು ನಯವಿನಯದಿಂದ, ಭಕ್ತಿಭಾವದಿಂದ ತುಂಬಿ ತುಳುಕಿ ಹರಿಯುತ್ತಿದೆ! ನುಡಿಯಂತೆ ನಡೆಯು ಸಹ! ಬಡತನದ ನಿರಸನಕ್ಕಾಗಿ ಸಹಾಯ ಕೋರಲು ಬಂದು ನಾಚುಗೆಯಿಂದ ಏನನ್ನೂ ಕೇಳದೆ ಹೋಗಿದ್ದಾನೆ. ಬಡವನಾದರೂ ಎಷ್ಟೊಂದು ಆತ್ಮಾಭಿಮಾನ! ಸುಸಂಸ್ಕೃತನ ಲಕ್ಷಣವಿದು. ಆದರೆ, ಮನೆಗೆ ಹೋಗಿ ಹೆಂಡತಿಯೊಡನೆ ಏನೆನ್ನುವನೋ ತಿಳಿಯದು.

ರುಕ್ಮಿಣಿ: ಸ್ವಾಮೀ, ಬೇಕಾದರೆ ಜಡಜಗತ್ತನ್ನು ಕ್ಷಣಮಾತ್ರದಲ್ಲಿ ಚೇತನವಾಗಿರಿಸಬಲ್ಲವರು ತಾವು. "ಭಕ್ತವತ್ಸಲ", "ಭಕ್ತಬಂಧು" ಎಂಬ ಬಿರುದನ್ನು ಹೊತ್ತು ಅವರ ಇಂಗಿತವನ್ನು ಈಡೇರಿಸ ಬಲ್ಲವರು ತಾವು. ಈ ಸಮಯ ಅವನನ್ನೇಕೆ ಬಡತನದ ಬೇಗೆಯಿಂದ ಬೇರ್ಪಡಿಸಬಾರದು? ಅವನಂತೂ ಬಾಲ್ಯ ಗೆಳೆಯನಷ್ಟೆ?

ಶ್ರೀಕೃಷ್ಣ: ಹಾಗೆಯೇ ಮಾಡುವೆ ರುಕ್ಮಿಣಿ. ಅವನ ಮನೆಯು ಅರಮನೆಯಾಗುವುದು. ಧನ, ಕನಕ, ವಜ್ರ ವೈಢೂರ್ಯಾದಿ ರಾಜೋಪ ಭೋಗಗಳನ್ನು ಅವನೂ ಅನುಭೋಗಿಸುವನು.

ರುಕ್ಮಿಣಿ: ಕೊಡುಗೈಯ ಒಡೆಯರು ನೀವು. ಪ್ರಪಂಚವೆಂಬ ರಂಗಸ್ಥಲವನ್ನು ನಿರ್ಮಿಸಿ, ಅನಂತ ದೇಹಗಳೆಂಬ ನಟರನ್ನು ನಿರ್ಮಿಸಿ, ಬೇಕುಬೇಕಾದಂತೆ ಆಡಿಸಬಲ್ಲ ವಿಶ್ವನಾಟಕ ಸೂತ್ರಧಾರಿ, ನೀವು. ಧರ್ಮಾಧರ್ಮ ವಿವೇಚನೆಯಿಲ್ಲದೆ, ಕಪಟ ನಾಟಕ ಸೂತ್ರಧಾರಿ, ಎನ್ನುವರು ಕೆಲವು ಮಂದಿ. ನಿಮ್ಮ ಅನುಗ್ರಹವು ಜಗದ ಒಳಿತಿಗೆ ಸಹಾಯಕವಾಗಲಿ! ನಿಮ್ಮ ನಿರಂತರ ಪರಿಶ್ರಮದ ಸವಿಗನಸು ಬಹುಬೇಗನೆ ನೆನಸಾಗಲಿ! ಸತ್ಯ ಧರ್ಮ ಶಾಂತಿಯು ಚಿರಪ್ರಕಾಶದಿಂದ ಜಗತ್ತು ಬೆಳಗಲಿ! ಬೆಳಗಿ ಬಾಳಲಿ! ಬಾಳಿ ಬದುಕಲಿ!

ಶ್ರೀಕೃಷ್ಣ: ನನ್ನಿಂದಾದಷ್ಟು ಪ್ರಯತ್ನಿಸುವೆನು.

(ಪರದೆ ಬೀಳುವುದು.)

ದೃಶ್ಯ ೪.

(ಬೀದಿ. ಕುಚೇಲನು ಮಡದಿ ಮಕ್ಕಳಿಗೆ ಏನು ಹೇಳಲಿಯೆಂದು ಯೋಚಿಸುತ್ತಾ ಬರುವನು.)

ಕುಚೇಲ: (ದುಃಖದಿಂದ ಕಂಠವು ತುಂಬಿ ಬಂದು) ಅಹುದು; ಪೂರ್ವಾರ್ಜಿತಾಘಫಲವಿದು. ಇಲ್ಲದಿದ್ದರೆ ಹೀಗಾಗುತ್ತಿತ್ತೇ? ಉದ್ಯಾನವನವನ್ನು ಬಂದು ಸೇರಿ, ನಳಿನಾಳಿ ಅಳಿಕುಲಕ್ಕೆ ಮಕರಂದವೀವುದನು ಕಂಡು— "ಇಲ್ಲಿಗೆ ಬಂದವರಾರೂ ನಿರಾಶೆಯಿಂದ ಹಿಂತಿರುಗುತ್ತಿಲ್ಲ" ಎಂದು ನಂಬುಗೆಯನ್ನಿಟ್ಟುಕೊಂಡೆ. ಆದರೆ, ಭಾಗ್ಯಹೀನನಾದ ನನ್ನ ನಂಬುಗೆ ವಿಫಲವಾಯಿತು. ಸೌದಾಮಿನಿಯೊಡನೆ ಏನೆನ್ನಲಿ? ಮಕ್ಕಳು ಓಡೋಡಿ ಬಂದು--ಅಪ್ಪಾ, ಅಪ್ಪಾ, ಏನು ತಂದಿರಿ? ಹಸಿವಾಗುತ್ತೆ ಎಂದರೆ, ಏನೆನ್ನಲಿ? ಹೇಗೆ ಸಂತಯಿಸಲಿ? ನಾನಂತೂ ಕೃಷ್ಣನಲ್ಲಿ ಕೆಲದಿನವಿದ್ದು ಸುಖಭೋಜನವನ್ನುಂಡೆ. ಮಡದಿಮಕ್ಕಳು ಹೇಗಿರುವರೋ! ನಾನು ಆಹಾರವನ್ನು-ತರಬಹುದೆಂದು ಕಾದುಕುಳಿತಿರಬಹುದೇ? ನಿಜ; ಇಲ್ಲವಾದರೆ ಇಷ್ಟು ದಿವಸ ಅಷ್ಟು ಮಕ್ಕಳ ಉದರ ಪೋಷಣೆಯನ್ನು ಅವಳೆಂತು ಸಾಗಿಸಬೇಕು? ಛೆ! ನನ್ನ ಆತ್ಮಾಭಿಮಾನ ಏನೆಲ್ಲಾ ಮಾಡಿಬಿಟ್ಟಿತು! (ಒಂದೇ ಸವನೆ ತನ್ನನ್ನು ತಾನೆ ಪರಿಶೀಲಿಸಿ) ನನಗೇಕೇ ಪೀತಾಂಬರ? ಯಃಕಶ್ಚಿತ್ ಮಡದಿ ಮಕ್ಕಳನ್ನು ಸಲಹಲಾರದವನಿಗೆ ಏತಕ್ಕೇ ಪೀತಾಂಬರ? (ತೆಗೆದು ಬಿಸುಡಲು ನೋಡುವನು) ಹಾಂ; ಏನಿದು ಭ್ರಮೆ? ನಾನೆಲ್ಲಿರುವೆನು! ಮಕ್ಕಳಿಗೆ ಹೊದೆಯಲಿಕ್ಕಾದರೂ ಆಯಿತು. ಇಷ್ಟೊಂದು ಲಭ್ಯವಾದರೂ ಆಯಿತಲ್ಲ! ಧನ್ಯನಾದೆ. ಪಾತ್ರವೆಷ್ಟು ಗಾತ್ರವುಳ್ಳದೋ, ಅದರಲ್ಲಿ ಹಿಡಿಯುವ ನೀರೂ, ಒಂದೇ ಪ್ರಮಾಣದ್ದು. ನಾನಾಗಿ ಕೇಳುತ್ತಿದ್ದರೆ ಸಹಾಯ ಮಾಡುತ್ತಿದ್ದನೋ ಏನೋ! ಆದರೆ, ನನಗೆ ಆತ್ಮಾಭಿಮಾನ ಹೆಚ್ಚಾಯಿತು. ಅವನಾಗಿ "ಏನು ಕಾರಣ ಬಂದೆ?" ಎಂಬುದಾಗಿಯೂ ಪ್ರಶ್ನಿಸಲಿಲ್ಲ. (ಕ್ಷಣಕಾಲ ಯೋಚಿಸಿ) ಹೋ; ಈಗ ತಿಳಿಯಿತು. ಪರಮಾತ್ಮನು ಜನರನ್ನು ದುಃಖಕ್ಕೀಡು ಮಾಡುವುದಿದಕ್ಕೇ. ಬಡತನದಲ್ಲಿ, ದುಃಖದಲ್ಲಿ, ಇರುವಾಗ ದೇವರ ನೆನಪು. ಸುಖ ಬಂದಾಗ, ಧನಕನಕ ತುಂಬಿ ತುಳುಕುತ್ತಿರುವಾಗ, ದೇವರ ನೆನಪಿಲ್ಲ; ಧರ್ಮದ ಆಚರಣೆಯಿಲ್ಲ. ಧನಿಕ ಮಾಡಿದ್ದೇ ಧರ್ಮ. ಸಂಕಟ ಬಂದಾ

ಗಲೆ ಇಲ್ಲವೆ, ವೆಂಕಟರಮಣ ಎನ್ನುವುದು ಮಂದಿ? ಅದಕ್ಕಾಗಿ ನನಗೀ ಬಡತನ. ಅದಕ್ಕಾಗಿ ನನಗೀ ದುಃಖ. ದುಃಖವೇ ಪರಮಾತ್ಮನನ್ನರಸಲು ದಾರಿದೋರುವ ಬೆಳಕು. ದುಃಖವೇ ಅಹಂನಾಶಕ ಹೇತು. ಬರಲಿ; ಅಂತಹ ದುಃಖಗಳೆನಗೆ ನೂರ್ಮಡಿ ಬರಲಿ. ದುಃಖದ ಭವ್ಯತೆಯಲ್ಲಿ ಪರಮಾತ್ಮನನ್ನರಸುವೆ! ಅರಸಿ, ಕಾಣುವೆ! ಕಂಡು ಸುಖಿಸುವೆ! ಸುಖಿಸಿ ನಿತ್ಯಾನಂದ ಪಡೆವೆ!

(ಪರದೆ ಬೀಳುವುದು)

ದೃಶ್ಯ ೫.

(ಕುಚೇಲನು ತನ್ನ ಗುಡಿಸಲಿದ್ದ ಸ್ಥಳಕ್ಕೆ ಬರುವನು. ಆದರೆ, ಗುಡಿಸಲು ಕಾಣುವುದಿಲ್ಲ. ಅದೇ ಸ್ಥಳದಲ್ಲಿ ನವ್ಯವೂ, ಭವ್ಯವೂ ಆದ ಅರಮನೆ ಕಾಣುತ್ತದೆ.)

ಕುಚೇಲ: ಹಾ! ನನಗೇಕೆ ನನ್ನ ಮನೆಯೇ ಕಾಣಿಸುವುದಿಲ್ಲ? ದಾರಿ ತಪ್ಪಿಹೋಯಿತೆ? ಇಲ್ಲ; ಇಲ್ಲ. (ಸುತ್ತಲೂ ಪರಿಶೀಲಿಸಿ) ಹೊ! ಇದಾರ ಅರಮನೆಯು? ಯಾರಾದರೂ ನಾನಿಲ್ಲದ ವೇಳೆಯನ್ನರಿತು, ಮಡದಿಮಕ್ಕಳನ್ನೋಡಿಸಿ, ಬಿಡದಿಯನ್ನು ಕೆಡವಿ, ಅರಮನೆಯನ್ನು ರಚಿಸಿರಬಹುದೆ? (ಯೋಚಿಸಿ) ಛೆ! ಛೆ! ಅದೆಂದೂ ಆಗಲಾರದು. ಹಾಗಾದರೆ ಹೀಗೇಕಾಯಿತು? (ಬಟ್ಟೆಗಾಣದೆ ಒಂದು ಕ್ಷಣ ಯೋಚಿಸುತ್ತಾ ನಿಲ್ಲುವನು. ಸೌದಾಮಿನಿ ಅರಮನೆಯಿಂದ ಹೊರಬರುವಳು. ಕುಚೇಲನು ಉದ್ವೇಗ ಪೂರ್ಣನಾಗಿ) ಅದಾರು ಬರುತ್ತಿರುವುದು? ಸೌದಾಮಿನಿಯೆ? ಅಲ್ಲ; ಅಲ್ಲ. ಚಿನ್ನಾಭರಣವನ್ನು ತೊಟ್ಟು ನವದುಕೂಲಧಾರಿಣಿಯಾಗಿದ್ದಾಳೆ. ಯಾರೋ ನೋಡುವ. (ಯೋಚಿಸುತ್ತಾ ನಿಲ್ಲುವನು.)

ಸೌದಾಮಿನಿ: (ಕುಚೇಲನ ಕಾಲುಹಿಡಿದು ನಮಸ್ಕರಿಸಿ) ಬನ್ನಿ ಸ್ವಾಮಿ, ಮನೆಯೊಳಗೆ ಹೋಗೋಣ. ಏನು ಯೋಚಿಸುತ್ತಿರುವಿರಿ?

ಕುಚೇಲ: (ಬೆರಗಾಗಿ) ಸೌದಾಮಿನಿ, ಏನಿದು? ನವಶೃಂಗಾರವಿದು ಎಲ್ಲಿಂದ? ಇದಾರ ಅರಮನೆ? ನೀನೇಕೆ ಇಲ್ಲಿಗೆ ಬಂದೆ? ಮಕ್ಕಳೆಲ್ಲಿ?

ಸೌದಾಮಿನಿ: ಇದೇ ನಮ್ಮ ಮನೆ. ಇಂದು ನಿದ್ದೆಯಿಂದೆದ್ದು ಕಾಣುವಾಗ ಹೀಗಾಗಿದೆ. ನವರತ್ನಾದಿ ಸಕಲ ಪಡಿ ಪದಾರ್ಥಗಳೂ ಮನೆಯಲ್ಲೇ

ಇವೆ. ಬನ್ನಿ, ಒಳಗೆ ಹೋಗೋಣ. ಎಲ್ಲವೂ ಪ್ರಭುಲೀಲೆ. (ಮನೆಯೊಳಗೆ ಹೋಗುವರು.)

ಕುಚೇಲ: ಸೌದಾಮಿನೀ, ಕಂಡೆಯಾ, ಭಕ್ತವತ್ಸಲನ ಮಹಿಮಾ ವಿಶೇಷತೆಯನ್ನು! ಬೇಡಿದರೆ ಬೇಡಿದಷ್ಟನ್ನು ಕೊಡಬಲ್ಲ. ತನಗೇ ಇಷ್ಟ ಬಂದಾಗ ಅದೆಷ್ಟು ಕೊಡಬಲ್ಲನೋ ಅದು—ಅಗಾಧವೂ, ಅಗೋಚರವೂ, ಅಗಮ್ಯವೂ ಆಗಿದೆ. ತನ್ನನ್ನು ನಂಬಿದವರಿಗಾಗಿ ಅದೆಷ್ಟು ಶ್ರಮ ವಹಿಸ ಬಲ್ಲನೋ ಅದು—ವರ್ಣನಾತೀತ, ಊಹನಾತೀತ, ಭಾವನಾತೀತವಾಗಿದೆ. ಅವನೊಲಿದವನ ಬಾಳು--ಸೌಖ್ಯದೀಪಿನಿ, ಆನಂದಕಾರಿಣಿ, ಶಾಂತಿದಾಯಿನಿ ಯಾಗಿದೆ. ಸೌದಾಮಿನೀ, ಆತ್ಮಾಭಿಮಾನದಿಂದ ನಾನೇನೂ ಕೇಳಲಿಲ್ಲ. ಆದರೂ ಮನದಿಂಗಿತವನ್ನರಿತು ನಾನು ಮನೆ ಸೇರುವ ಮೊದಲೇ ಕರುಣಿಸಿದ ನಲ್ಲ! ಆ ಶರಣಜನ ಸುರಧೇನುವಿಗೆ ಶರಣರಲಿ ಅದೇನು ಕರುಣೆಯೋ! ಆ ಅವಾಗ್ಮಾನಸಗೋಚರನಾದ ಶ್ರೀಹರಿಯನ್ನು ಅನನ್ಯ ಭಕ್ತಿಯಿಂದ ಪ್ರಾರ್ಥಿಸೋಣ.

ಸೌದಾಮಿನಿ: ಮಕ್ಕಳನ್ನೂ ಬರಹೇಳುವೆ.

ಕುಚೇಲ: ನರ ನಾರಾಯಣ; ಯಾವ ಯಾವ ಕಾಲದಲ್ಲಿ, ಯಾವ ಯಾವ ರೂಪದಲ್ಲಿ ನಿನ್ನ ಶರಣರನ್ನು ಪಾಲಿಸುವೆಯೋ, ಹೇಗೆ ತಿಳಿಯಲಿ? ಜಗದ ಕಲ್ಯಾಣಕ್ಕಾಗಿ ನಿನ್ನ ಜನುಮ. ಮುಂದೆಯೂ ಆಗಾಗ ಬಂದು, ಧರ್ಮವನ್ನು ಕಾಪಾಡಿ, ಜನತೆಯನ್ನು ಪೊರೆದು, ರಕ್ಷಿಸು ರಕ್ಷಿಸಾ ವಿಶ್ವ ನಾಟಕ ಸೂತ್ರಧಾರಿ! ಶರಣು! ಶರಣು! ಶರಣು!

(ಮಕ್ಕಳು ಬರುವರು. ಎಲ್ಲರೂ ಕುಳಿತು ಹಾಡುವರು.)

|| ರಾಗ: ಮಾಲಕಂಸ. ತಾಳ: ತ್ರಿತಾಳ ||

ಪರಮ ಪುರುಷ ಪೊರೆಯೈ । ಪರಾತ್ಪರ || ಪಲ್ಲ ||

ಸುರನರವಂದಿತ । ಭರಿತ ಕರುಣಯುತ ।
ಪೊರೆಯೊ ಜಗವ ತವ । ಕರುಣಕವಚದೊಳು || ೧ ||

ದುಷ್ಟಜನಸಾಹತ । ಶಿಷ್ಟಜನಾಹಿತ ।
ನಿಷ್ಠೆಯಿಂ ಭಜಿಪ । ಶಿಷ್ಟರ ಪಾಲಿಪ ॥ ೨ ॥

ಯಾದವ ಜನಮನ । ಮೋದವ ತೋರುವ ।
ಶ್ರೀಧರ ಕೇಶವ । ಸಾದರದಲಿ ಪೊರೆ ॥ ೩ ॥

(ತೆರೆ.)

— ಸಂಪೂರ್ಣ. —

[ವಿ. ಸೂ.—ಶ್ರೀಕೃಷ್ಣ ರುಕ್ಮಿಣಿಯರೊಳಗಿನ ದ್ವಯಾರ್ಥ ಮಾತುಕತೆ ಸುಭಾಷಿತದಿಂದ ಆಯ್ದುದಾಗಿದೆ. —ಲೇ.]

Edited, Printed & Published by K. V. Shenoy
at The Prabhat Printers, Ltd., Mangalore.